## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್. 50/2021

ಸಾಕ್ಷಿಯನ್ನು ದಿಃ **18.12.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರಃ ಶ್ರೀ. ಡಿ.ಕೆ ವಕೀಲರಿಂದ**:

ದಾವಾ ಸ್ವತ್ತು ನನಗೆ ಸೇರಿದ ಆಸ್ತಿಯಾಗಿದ್ದು, ಅದರ ಪಹಣಿ ನನ್ನ ಹೆಸರಿನಲ್ಲಿ ಓಡುತ್ತಿತ್ತು ಎಂದರೆ ಸರಿ. ದಾವಾ ಸ್ವತ್ತು ನನ್ನ ಪೂರ್ವಜರ ಹೆಸರಿನಲ್ಲಿ ಇರಲಿಲ್ಲ ಅದನ್ನು ನಾನು ಖರೀದಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 4ನೇ ಪ್ಯಾರಾದಲ್ಲಿ ಹೇಳಿರುವ ಬೇರೆ ಜಮೀನು ಮಾರಾಟ ಮಾಡಿ ದಾವಾ ಸ್ವತ್ತನ್ನು ಖರೀದಿಸಿದ್ದೇನೆ ಎಂದು

ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಪೂರ್ವಜರಿಗೆ ಬೇರೆ ಯಾವುದಾದರೂ ಜಮೀನು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

ನಾನು ವಾದಿಯ ಜೊತೆ ದಾವಾ ಸ್ವತ್ತಿನ ಬಗ್ಗೆ ರೂ.27,50,000/-ಕ್ಕೆ ಕ್ರಯದ ವ್ಯವಹಾರವನ್ನು ಮಾಡಿದ್ದೇನೆ ಎಂದರೆ ಇಲ್ಲ. ನಾನು ಸಹಿ ಹಾಕುತ್ತೇನೆ. ಸಾಕ್ಷಿಗೆ ನಿಪಿ-5 ಮತ್ತು 6ರ ಕ್ರಯದ ಕರಾರುಗಳನ್ನು ತೋರಿಸಲಾಗಿ ಸಾಕ್ಷಿ ಎರಡೂ ದಾಖಲೆಗಳಲ್ಲಿ ತನ್ನ ಸಹಿಗಳನ್ನು ಗುರುತಿಸುತ್ತಾರೆ. ನಿಪಿ-5 ಮತ್ತು 6 ರಲ್ಲಿರುವ ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ನಿಪಿ-5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು. ನನ್ನ ಪತ್ನಿಯ ಹೆಸರು ರಾಮಮ್ಮ. 3 ಮತ್ತು 4ನೇ ಪ್ರತಿವಾದಿಯರು ನನ್ನ ಮಕ್ಕಳು. ನನ್ನ ಹಾಗೂ 2 ರಿಂದ 4ನೇ ಪ್ರತಿವಾದಿಯರ ಪರವಾಗಿ ಪ್ರತಿವಾದ ಪತ್ರವನ್ನು ಮತ್ತು ನನ್ನ ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಗೆ ನಿಪಿ-5 ಮತ್ತು 6 ರನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿ ತನ್ನ ಪತ್ನಿಯಾದ ರಾಮಮ್ಮರವರ ಸಹಿಗಳನ್ನು ಗುರುತಿಸಿದ್ದು, ಸದರಿ ಸಹಿಗಳನ್ನು ಒಟ್ಟಾಗಿ ನಿಪಿ-5(ಬಿ) ಮತ್ತು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-6ನ್ನು ತೋರಿಸಿ 3ನೇ ಪ್ರತಿವಾದಿಯ ಸಹಿಯನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆದರೆ 3ನೇ ಪ್ರತಿವಾದಿ ಸಹಿ ಹಾಕುತ್ತಾರೆ ಎಂದು ಹೇಳುತ್ತಾರೆ. ನಿಪಿ-5 ಮತ್ತು 6ಕ್ಕೆ ನಾನು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿ. ಉಪನೋಂದಣಾಧಿಕಾರಿಗಳ ಕಚೇರಿಗೆ ನಾನು, ನನ್ನ ಪತ್ನಿ ಮತ್ತು ಮಗಳು ಹೋಗಿದ್ದೆವು.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.